ಮಹಾನಗರದ ದೊಡ್ಡ ಕಚೇರಿಯಲ್ಲಿ ನೌಕರಿಗೆ ಸೇರಿದಾಗಿನಿಂದ ಬಿಡುವೇ ಸಿಗದಾಗಿತ್ತು. ಬಹಳ ಕಾಲದ ನಂತರ, ನನಗೆ ಸಿಕ್ಕಿದ್ದ ನೌಕರಿಯನ್ನು ಉಳಿಸಿಕೊಳ್ಳುವುದು ಅನಿವಾರ್ಯವಾಗಿತ್ತು. ನಾನೂ ಪ್ರಾಮಾಣಿಕವಾಗಿ ದುಡಿಯುವ ಸ್ವಭಾವದವನು, ಹೀಗಾಗಿ ಮಾಲಿಕರಿಗೆ ಬೇಕಾದವನಾಗಿದ್ದೆ. ಅವರು ಪಗಾರ, ಗೌರವ, ಅವಕಾಶ ಕೊಡುತ್ತಿದ್ದರು, ಆದರೆ ರಜೆಯನ್ನೇ ಕೊಡುತ್ತಿರಲಿಲ್ಲ. ಎಲ್ಲಿಗೂ ಹೋಗಬೇಡ ಎಂದು, ಇಡೀ ಕಚೇರಿಯ ಜವಾಬ್ದಾರಿಯನ್ನು ನನ್ನ ಮೇಲೆಯೇ ಬಿಟ್ಟಿದ್ದರು. ಈ ವರ್ಷ ಹಬ್ಬದ ಹೊತ್ತಿಗೆ, ಒಂದೆರಡು ದಿನಗಳ ಮಟ್ಟಿಗೆ ಆದರೂ, ಊರಿಗೆ ಹೋಗಲೇಬೇಕು ಅಂದುಕೊಂಡಿದ್ದೆ. ಅದನ್ನು ಮಾಲಿಕರಿಗೆ ಸಾಕಷ್ಟು ಮೊದಲೇ ತಿಳಿಸಿಯೂ ಇದ್ದೆ. ಹೀಗಾಗಿ ಬಹಳ ವರ್ಷಗಳ ನಂತರ ಈ ಸಲ ಊರಿಗೆ ಬಂದಿದ್ದೆ. ಹೊರನಾಡಿನಿಂದ ತಾಯಿನಾಡಿಗೆ ಬಂದಷ್ಟು ಸಂತೋಷವಾಗಿತ್ತು.

ಮಧ್ಯಾಹ್ನದ ಬಿಸ್ಲಿಗೆ, ಊಟದ ಹೊತ್ತಿಗೆ ಊರಿಗೆ ಬಂದ ನನ್ನನ್ನು ನೋಡಿ ಅವ್ವನಿಗೆ ಅಪಾರ ಆನಂದವಾಗಿತ್ತು. ಚೀಲ ಗೋಡೆಯ ಗೂಟಕ್ಕೆ ಇಳಿಬಿಟ್ಟೆ, ಪಡಸಾಲೆಯ ಕಟ್ಟೆಯ ಮೇಲೆ ಕೂತೆ. ಬಚ್ಚ ಬಾಯಿ ಬಿಟ್ಟು ನಗುತ್ತ, 'ಎಷ್ಟು ಸೊರಗೀಯಲ್ಲೋ ಮಗನ' ಎನ್ನುತ್ತ ಅವ್ವ ಎರಡೂ ಕೈ ಎತ್ತಿ ಲಟಿಗೆ ಮುರಿದಳು. ತಲೆ ಹಿಡಿದುಕೊಂಡು, ಗೋಡೆಯ ಕಡೆ ನೋಡುತ್ತ, ಅಲ್ಲಿದ್ದ ಎಲ್ಲ ದೇವರ ಫೋಟೊಗಳಿಗೆ ಕೈಮುಗಿದಳು. 'ಬಾ, ಕೈ ಕಾಲು ತೊಳಕೋ ಬಾ. ಮುಂಜೇಲೆ ಎಷ್ಟ ಹೊತ್ತಿಗೆ ಹೊಂಟಿದ್ದಿ?' ಎಂದು ಕೇಳುತ್ತ, ನಾನು ಉತ್ತರಿಸುವ ಮೊದಲೇ, ನನ್ನನ್ನು ದರದರ ಎಳೆಯುತ್ತ ಅಡುಗೆಮನೆ ಕಡೆ ಕರೆದೊಯ್ದಳು. ಅವಳ ಪಾಲಿಗೆ ನಾನು ಇನ್ನೂ ಅವಳ ಕೈಕೂಸಾಗಿಯೇ ಇದ್ದೆ. ನಾನು ಕೈ ಕಾಲು ತೊಳೆಯುವುದೊಂದೇ ಸೊನ್ನೆ, ಬಂದವಳೇ ತನ್ನ ಸೀರೆಯ ಸೆರಗಿನಿಂದ ಮಾರಿ ಒರೆಸಿದಳು. ಒಳಗೊಳಗೇ ನಗುತ್ತ ಅವ್ವನ ಈ ಆತ್ಮಾನಂದವನ್ನು ಅನುಭವಿಸತೊಡಗಿದೆ. ಮಣೆಯ ಮೇಲೆ ಕೂತೆ. 'ದೇವರಿಗೆ ಸಣಮಾಡು' ಎಂದಳು. ದೇವರ ಕೋಣೆಗೆ ಹೋಗಿ ಕೈಮುಗಿದು ಹೊರಬರುವಷ್ಟರಲ್ಲಿ, ತಾಟಿನಲ್ಲಿ ಹೋಳಿಗೆ, ಬಿಸಿಬಿಸಿ ತುಪ್ಪ ಸುರಿದಿದ್ದಳು. ಒಂದಷ್ಟು ಹಪ್ಪಳ, ಸಂಡಿಗೆ, ಕರಿದ ಮೆಣಸಿನಕಾಯಿ ಬಟ್ಟಲದಲ್ಲಿ ಇಟ್ಟಿದ್ದಳು. 'ಈಗ ಇಷ್ಟ

